<u>ದಿನಾಂಕಃ **07-12-2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಹೆಚ್ ಎಸ್ ಕೆ ವಕೀಲರಿಂದಃ</u>

ನಿಪಿ- 85 ಕ್ಕೆ ಸಂಬಂಧಿಸಿದಂತೆ ಸರ್ವೆ ಕಡತ ಇದೆಯ ಎಂದರೆ ಸಾಕ್ಷಿ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ನಮೂನೆ 10 ರ ಹಿಂಭಾಗದಲ್ಲಿ ಸರ್ವೆ ನಂಬರ್ ವಿಸ್ತೀರ್ಣ ಮತ್ತು ಚೆಕ್ಕುಬಂಧಿಯನ್ನು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ - 85 ರಲ್ಲಿ ಚೆಕ್ಕು ಬಂಧಿಯನ್ನು ನಮೂದಿಸದೇ ಖಾಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಸರ್ವೆ ನಂಬರ್ 222 ಕ್ಕೆ ಸಂಬಂಧಿಸಿದ ಪಹಣಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು ಅದನ್ನು ನಿಡಿ- 72 ಎಂದು ಗುರುತಿಸಲಾಯಿತು. ನಿಡಿ - 72 ರಲ್ಲಿ 1 ನೇ ಪ್ರತಿವಾದಿಯ ಹೆಸರಲ್ಲಿ 4 ಎಕರೆ 25 ವರೆ ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಕೋರ್ಟ್ ಕಮೀಷನರ್ ಆದೇಶದಂತೆ ನಮಗೆ 25 ಗುಂಟೆ ಜಮೀನನ್ನು ಜಯಮ್ಮ ಇವರು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ್ 222 ಈ ವರೆಗೆ ಪೋಡು ಆಗಿರುವುದಿಲ್ಲ ಎಂದರೆ ಸರಿ. ಸರ್ವೆ ನಂಬರ್ 222 ಯಾವ ಕಾರಣಕ್ಕಾಗಿ ಪೋಡು ಆಗಿರುವುದಿಲ್ಲ ಎಂದರೆ ಸಾಕ್ಷಿ ಜಯಮ್ಮ, ಗೌರಮ್ಮ ಹಾಗೂ ಶಾಂತಮ್ಮ ಇದುವರೆಗೂ ವಿಭಾಗ ಮಾಡಿಕೊಳ್ಳದ ಕಾರಣ ಪೋಡು ಆಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಇನ್ನೊಂದು ಪಹಣಿ ಪತ್ರಿಕೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಲಾಗಿ ಅದನ್ನು ನಿಡಿ- 73 ಎಂದು ಗುರುತಿಸಲಾಯಿತು. ಸರ್ವೆ ನಂಬರ್ 132 ನ್ನು ಈ ದಾವೆಯಲ್ಲಿ ದಾವಾ ಸ್ವತ್ತನ್ನಾಗಿ ಸೇರಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಕಣ್ಣು ತಪ್ಪಿನಿಂದ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಬಿಲಗದ್ದೆ ಗ್ರಾಮದ ಸರ್ವೆ ನಂಬರ್ 223 ಸರ್ಕಾರಿ ಜಮೀನು ಎಂದರೆ ಸರಿ. ದಾವಾ ಸ್ವತ್ತನ್ನಾಗಿ ಸೇರಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಕಣ್ಣು ತಪ್ಪಿನಿಂದ ಆಗಿರು ತ್ತದೆ ಎಂದು ಉತ್ತರಿಸುತ್ತಾರೆ . ಬಿಲಗದ್ದೆ ಗ್ರಾಮ ಸರ್ವೆ ನಂಬರ್ 223 ಸರ್ಕಾರಿ ಜಮೀನು ಎಂದರೆ ಸರಿ. ನಾನು ಈ ದಾವೆಯಲ್ಲಿ ಸರ್ವೆ ನಂಬರ್ 137 ಮತ್ತು 223 ಕ್ಕೆ ಪರಿಹಾರ

ಕೇಳಿರುತ್ತೇನೆ ಎಂದರೆ ಸಾಕ್ಷಿ ನಾನು ಯಾವುದೇ ಪರಿಹಾರ ಕೇಳಿರುವುದಿಲ್ಲ ಎಂದು ಉತ್ತರಿಸುತ್ತಾರೆ.

2. ನಿಪಿ- 91 ನಾನೇ ಬರೆದ ಅರ್ಜಿ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ- 91 ರಲ್ಲಿ ಮೂರನೆ ಸಾಲಿನಲ್ಲಿನ ಅಂಶಗಳನ್ನು ಕೇಳಲಾಗಿ ಸಾಕ್ಷಿ ಸದರಿ ಸಾಲಿನಲ್ಲಿ ಅಂಶಗಳನ್ನು ಒಪ್ಪಿಕೊಂಡಿದ್ದು ಸದರಿ ಭಾಗವನ್ನು ನಿಸಿ- 1(ಎ) ಎಂದು ಗುರುತಿಸಲಾಯಿತು. ನಿಪಿ- 99 ರ ಜೊತೆ ಅಡಕವಾಗಿರುವ ನಕ್ಷೆ ಹಾಗೂ ಅದರಲ್ಲಿ ಹರಿಶಿಣ ಬಣ್ಣದಿಂದ ಗುರುತಿಸಿರುವ ಜಾಗ ಮತ್ತು ನಿಪಿ- 100 ರ ಜೊತೆ ಅಡಕವಾಗಿರುವ ನಕ್ಷೆಯಲ್ಲಿನ ಅಂಶಗಳನ್ನು ನಾನು ಒಪ್ಪಿಕೊಳ್ಳುತ್ತೇನೆ ಎಂದರೆ ಸರಿ. ದಾವಾ ಆಸ್ತಿ 157 ಕ್ಕೆ ಸಂಪರ್ಕ ಕಲ್ಪಿಸುವ ನಕಾಶೆಯಲ್ಲಿರುವ ರಸ್ತೆಯನ್ನು ಗುರುತಿಸಲು ನ್ಯಾಯಾಲಯದ ನಿಯೋಗಿಯನ್ನು ನೇಮಕಮಾಡಲು ನನ್ನದು ತಕರಾರು ಇರುತ್ತದೆ. ಗ್ರಾಮ ನಕಾಶೆಯಲ್ಲಿ ತೋರಿಸಲಾದ ರಸ್ತೆಯನ್ನು ಗುರುತಿಸಲು ಏಕೆ ತಕರಾರು ಇರುತ್ತದೆ ಎಂದರೆ ಸಾಕ್ಷಿ ನಮ್ಮ ಜಮೀನು ಬಳಿ ಇದ್ದ ರಸ್ತೆಯನ್ನು ಅನಾದಿಕಾಲದಿಂದಲೂ ಅತಿಕ್ರಮಣ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

3.ಮೂಲ ದಾವಾ ಸಂಖ್ಯೆ 33/2016 ದಾವೆ ಹೂಡುವ ಕಾಲಕ್ಕೆ ಅಕ್ರಮ ಕಟ್ಟಡ ಇತ್ತು ಎಂದರೆ ಸಾಕ್ಷಿ ಮೊದಲಿನಿಂದಲೂ ಇತ್ತು ಎಂದು ಉತ್ತರಿಸುತ್ತಾರೆ. ನಿಪಿ- 89 ರಲ್ಲಿ ಮೂಲದವಾ ಸಂಖ್ಯೆ 33/2016 ರಲ್ಲಿ ಕೇಳಿದ ಮನೆ ಇತ್ತ ಎಂದರೆ ಸಾಕ್ಷಿಯು ಸದರಿ ಮನೆ ಬೇರೆ ಸರ್ವೆ ನಂಬರ್ ನಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 222 ರ ಜಮೀನಿನಲ್ಲಿ ಇರುವ ಶಾಂತಮ್ಮ ಮತ್ತು ಇತರರು ನಿಮ್ಮ ಪರ ಸಾಕ್ಷಿ ಮಾಡಿಸುತ್ತೀರ ಎಂದರೆ ಸಾಕ್ಷಿ ನೀವು ಬೊಬ್ಬೆ ಹೊಡೆಯುತ್ತೀರಿ ಎಂದು ಉತ್ತರಿಸುತ್ತಾರೆ. ಅಲ್ಲದೇ ನೀವು ಯಾರನ್ನಾದರು ವರ್ಗಾವಣೆ ಮಾಡಿಸುತ್ತೀರಿ ಎಂದು ಉತ್ತರಿಸುತ್ತಾರೆ.

4. ಬಿಲಗದ್ದೆ ಗ್ರಾಮದಲ್ಲಿ ಎಷ್ಟು ಮನೆಗಳು ಇರುತ್ತವೆ ಎಂದು ನನಗೆ ಗೊತ್ತಿರುವುದಿಲ್ಲ. ಬಿಲಗದ್ದೆ ಗ್ರಾಮದ ಯಾರಾದರು ನಿಮ್ಮ ಪರ ಸಾಕ್ಷಿ ಹೇಳುತ್ತಾರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಊರಿನ ಪಕ್ಕದ ಗ್ರಾಮ ಶೃಂಗೇರಿ ತಾಲ್ಲೂಕಿನ ಬೇಗಾನೆ ಗ್ರಾಮ ಎಂದರೆ ಸರಿ. ಸರ್ವೆ ನಂಬರ್ 137 ಹಾಗೂ 223 ನ್ನು ಈ ದಾವಾ ಶೆಡ್ಯೂಲ್ ನಲ್ಲಿ ಸೇರಿಸಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಕೈ ತಪ್ಪಿನಿಂದ ಆಗಿರುತ್ತದೆ

ಎಂದು ಉತ್ತರಿಸುತ್ತಾರೆ. ನಕಾಶೆಯಲ್ಲಿರುವ ರಸ್ತೆ ಯಾವ ಯಾವ ಸರ್ವೆ ನಂಬರ್ ಗಳ ಮುಖಾಂತರ ಹೋಗುತ್ತದೆ ಎಂದು ನನಗೆ ಹೇಳಲು ಆಗುವುದಿಲ್ಲ. ಸರ್ವೆ ನಂಬರ್ 222 ರಲ್ಲಿ 12.5 ಗುಂಟೆ ಜಾಗ ನನ್ನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ್ 222 ರಲ್ಲಿ ನಿಮ್ಮದು ಯಾವುದಾದರು ಮನೆಗಳು ಇದ್ದವಾ ಎಂದರೆ ಸಾಕ್ಷಿ ಕೊಟ್ಟಿಗೆ ಮತ್ತು ಶೆಡ್‌ಗಳು ಇದ್ದವು ಎಂದು ಉತ್ತರಿಸುತ್ತಾರೆ. ಸದರಿ ಜಾಗಕ್ಕೆ ಈಗ ಪೌಂಡೇಷನ್ ಇರುತ್ತದೆ ಎಂದರೆ ಸಾಕ್ಷಿ ಸಂಪೂರ್ಣ ತೋಟ ಇರುತ್ತದೆ ಎಂದು ಉತ್ತರಿಸುತ್ತಾರೆ.

5. ಇತ್ತೀಚೆಗೆ ತೀರಿಕೊಂಡು ಮಂಜುನಾಥ್ ನನಗೆ ಚಿಕ್ಕಪ್ಪನಾಗಬೇಕು. ಸರ್ವೆ ನಂಬರ್ 222 ರಲ್ಲಿ ಮಂಜುನಾಥ್ ಇವರಿಗೆ ಮನೆ ಇರುತ್ತದೆ ಎಂದರೆ ಸಾಕ್ಷಿ ಅವರಿಗೆ ಆಶ್ರಯ ಯೋಜನೆಯಡಿ ಸರ್ವೆ ನಂಬರ್ 152 ರಲ್ಲಿ ಮನೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 152 ಸರ್ವೆ ನಂಬರ್ 222 ರ ಅಕ್ಕ ಪಕ್ಕ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆ ಮಂಜುನಾಥ ಮನೆಗಿಂತ ಎಷ್ಟು ದೂರ ಇರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಮಂಜುನಾಥ ಮತ್ತು ಪ್ರತಿವಾದಿ ಅಕ್ಕ ಪಕ್ಕ ವಾಸ ಇರುತ್ತಾರೆ ಎಂದರೆ ಸರಿ. ಮಂಜುನಾಥ ಮತ್ತು ಪ್ರತಿವಾದಿ ಯಾವ ರಸ್ತೆಯ ಮುಖಾಂತರ ಓಡಾಡುತ್ತಾರೆ ಎಂಬುದರ ಬಗ್ಗೆ ನ್ಯಾಯಾಲಯದ ನಿಯೋಗಿಗಳನ್ನು ನೇಮಕ ಮಾಡಲು ನನ್ನ ಒಪ್ಪಿಗೆ ಇರುವುದಿಲ್ಲ. ಪ್ರತಿವಾದಿಗಳು ತಮ್ಮ ಲಿಖಿತ ಹೇಳಿಕೆಯ ಜೊತೆ ಒಂದು ಕಚ್ಚಾ ನಕಾಶೆಯನ್ನು ಹಾಜರುಪಡಿಸಿದ್ದು ಅದರ ಬಗ್ಗೆ ನಿಯೋಗಿಯನ್ನು ನೇಮಕ ಮಾಡಲು ನನ್ನದು ತಕರಾರು ಇರುತ್ತದೆ.

6. ನಾನು ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಡುಗೆ ಕೆಲಸ ಮಾಡುತ್ತಿದ್ದೆನು. ನನ್ನ ಹೆಂಡತಿ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನಾನು ನ್ಯಾಯಾಲಯದ ಮುಂದೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವಾ ಹೂಡಲು ಯಾವುದೇ ವ್ಯಾಜ್ಯಾ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವೆಗೋಸ್ಕರ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ  ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ